ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದ ಒಟ್ಟು ರಾಜಸ್ವ ರೂ.397.86 ಕೋಟಿಗಳಾಗಿದ್ದು, 07 ನಗರ ಸಭೆಗಳ ಒಟ್ಟು ರಾಜಸ್ವ ರೂ.259.00 ಕೋಟಿಗಳಾಗಿರುತ್ತದೆ. ಬಾಕಿ ಪ್ರದೇಶದಿಂದ ರೂ.671.61 ಕೋಟಿಗಳು ಸಂಗ್ರಹವಾಗಿದೆ.

ಆ) ನಷ್ಟವಾಗಿರುವುದಿಲ್ಲ.

ಮಾಹಿತಿ ಕೆಳಕಂಡಂತೆ ಇರುತ್ತದೆ:-

(ಕೋಟಿ ರೂ.ಗಳಲ್ಲಿ)

	2004-05	2005-06
ಬೆಂಗಳೂರು ನಗರ	1162.23	1101.35
ರಾಜ್ಯಾದ್ಯಂತ	1916.71	2276.42

(ಖಜಾನೆ ಅಂಕಿ ಅಂಶಗಳ ಪ್ರಕಾರ)

ಇ) ಉದ್ಭವಿಸುವುದಿಲ್ಲ.

178(215) ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್ (ಗೌರಿಬಿದನೂರು): ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಿಂದ 2003-04, 2004-05, 2005-06ನೇ ಸಾಲಿನಿಂದ ಹೊರ ರಾಜ್ಯಕ್ಕೆ ಮತ್ತು ಹೊರ ರಾಷ್ಟ್ರಕ್ಕೆ ರಫ್ತಾಗಿರುವ ರೇಷ್ಮೆ ಪ್ರಮಾಣವೆಷ್ಟು (ವಿವರ ಒದಗಿಸುವುದು);

ಆ) ಇದರಲ್ಲಿ ಸರ್ಕಾರಕ್ಕೆ ಬಂದಿರುವ ಆರ್ಥಿಕ ಆದಾಯವೆಷ್ಟು; (ವಿವರ ಒದಗಿಸುವುದು);

ಇ) ರಾಜ್ಯದ ರೇಷ್ಮೆ ಬೆಳೆಗಾರಿಗೆ ಸರ್ಕಾರವು 2004-05, 2005-06ನೇ ಸಾಲಿನಲ್ಲಿ ನೀಡಿರುವ ಸಬ್ಸಿಡಿ ಹಣವೆಷ್ಟು;

ಈ) ಸಬ್ಸಿಡಿ ಹಣವನ್ನು ಪೂರ್ಣವಾಗಿ ವಿತರಿಸಲಾಗಿದೆಯೇ;

ಉ) ಯಾವ ಯಾವ ಜಿಲ್ಲೆಗೆ ಪ್ರಮುಖ ಆದ್ಯತೆ ನಿಡಿ ವಿತರಿಸಲಾಗಿದೆ (ವಿವರ ಒದಗಿಸುವುದು);

ಊ) ರಾಜ್ಯದ ರೇಷ್ಮೆ ಬೆಳೆಗಾರರಿಗೆ ಸರ್ಕಾರವು ಯಾವ ಒತ್ತು ನೀಡಿ ಅಭಿವೃದ್ಧಿಪಡಿಸಲು ನೆರವಾಗುತ್ತಿದೆ; (ಮಾಹಿತಿ ಒದಗಿಸುವುದು);

ಋ) ರಾಜ್ಯದಲ್ಲಿರುವ ಬಿತ್ತನೆ ಕೋರಿಗಳ ಸಂಖ್ಯೆ ಎಷ್ಟು ಹಾಗೂ ಈ ಬಿತ್ತನೆ ಕೋರಿಯಿಂದ ಬಡ ರೈತ ರೇಷ್ಮೆ ಬೆಳೆಗಾರರಿಗೆ ನ್ಯಾಯಯುತವಾದ ಬೆಲೆ ಸಿಗುತ್ತದೆಯೇ (ಮಾಹಿತಿ ನೀಡುವುದು)?

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು):

ಅ) ನಮ್ಮ ರಾಷ್ಟ್ರದಲ್ಲಿ ಉತ್ಪಾದನೆಯಾಗುತ್ತಿರುವ ಕಚ್ಚಾ ರೇಷ್ಮೆಯ ಪ್ರಮಾಣ ಆಂತರಿಕ ಬೇಡಿಕೆಗಿಂತ ಕಡಿಮೆ ಇದ್ದು ರಫ್ತು ಮಾಡಲಾಗುತ್ತಿಲ್ಲ. ಆದರೆ ರೇಷ್ಮೆ ಜವಳಿ, ಸಿದ್ದ ಉಡುಪುಗಳು ಮತ್ತು ಇತರೆ ವಸ್ತುಗಳನ್ನು ರಫ್ತು ಮಾಡಲಾಗುತ್ತಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಷ್ಟ್ರದಿಂದ ರಫ್ತು ಮಾಡಿದ ರೇಷ್ಮೆ ಉತ್ಪನ್ನಗಳ ವಿವರ ಹಾಗೂ ಮೌಲ್ಯ ಕೆಳಕಂಡಂತಿದೆ.

(ಮೌಲ್ಯ ಕೋಟಿ ರೂ.ಗಳಲ್ಲಿ)

ಕ್ರ. ಸಂ.	ರಫ್ತಾದ ವಸ್ತುಗಳು	2003–04	2004–05	2005–06 (ನವೆಂಬರ್ 05ರ ಅಂತ್ಯಕ್ಕೆ)
1	ಕಚ್ಚಾ ಜವಳಿ ಮತ್ತು ಸಿದ್ಧ ವಸ್ತುಗಳು	1954.11	2008.33	1118.70
2	ಸಿದ್ಧ ಉಡುಪುಗಳು	699.52	746.29	623.83
3	ಕಾರ್ಪೆಟ್‌ಗಳು	120.22	123.65	54.14
4	ಸಿಲ್ಕ್ ವೇಸ್ಟ್	5.34	1.29	9.94
	ಒಟ್ಟು	**2779.19**	**2879.56**	**1806.61**
	ರಫ್ತು ವಹಿವಾಟಿನಲ್ಲಿ ಕರ್ನಾಟಕದ ಪಾಲು	**955.97**	**898.84**	**585.76**

ಕರ್ನಾಟಕದಲ್ಲಿ ಉತ್ಪಾದನೆಯಾದ ರೇಷ್ಮೆಯಲ್ಲಿ ಅಂದಾಜು ಶೇ.40 ರಷ್ಟು ನೆರೆ/ಇತರ ರಾಜ್ಯಗಳಲ್ಲಿ ಬಳಕೆಯಾಗುತ್ತಿದೆ.

ಆ) ಕರ್ನಾಟಕ ಸರ್ಕಾರಕ್ಕೆ ನೇರ ಆದಾಯ ದೊರೆಯುತ್ತಿಲ್ಲ. ದೊರೆತ ವಿದೇಶಿ ವಿನಿಮಯದ ವಿವರ "ಅ" ಉತ್ತರದಲ್ಲಿ ನೀಡಿದೆ.

ಇ) ರಾಜ್ಯದ ರೇಷ್ಮೆ ಬೆಳೆಗಾರರಿಗೆ 2004–05ನೇ ಸಾಲಿನಲ್ಲಿ ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮದಡಿ ರೂ.1542.55

ಈ) ಲಕ್ಷಗಳ ಸಹಾಯಧನ ನೀಡಲಾಗಿದೆ. 2005–06ರಲ್ಲಿ ರೂ.2525.00 ಲಕ್ಷಗಳ ಸಹಾಯಧನ ನೀಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದು ಇದುವರೆಗೆ ರೂ. 1086.91 ಲಕ್ಷಗಳ ಸಹಾಯಧನ ಬಿಡುಗಡೆ ಮಾಡಲಾಗಿದೆ. ಉಳಿದ ಹಣವನ್ನು ಕೇಂದ್ರ ರೇಷ್ಮೆ ಮಂಡಳಿ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಕೂಡಲೇ ವಿತರಿಸಲಾಗುವುದು.

ಉ) ರೇಷ್ಮೆ ವ್ಯವಸಾಯದ ವಿಸ್ತೀರ್ಣಕ್ಕೆ ಅನುಗುಣವಾಗಿ ಎಲ್ಲ ಜಿಲ್ಲೆಗಳಿಗೆ ಸಮಾನ ಆದ್ಯತೆ ನೀಡಿ, ಗುರಿ ನಿಗದಿ ಪಡಿಸಿ, ಹಣ ಬಿಡುಗಡೆ ಮಾಡಲಾಗುತ್ತಿದೆ.
ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಊ) ರಾಜ್ಯದ ರೇಷ್ಮೆ ಕೃಷಿ ಅಭಿವೃದ್ಧಿಗಾಗಿ, ರೇಷ್ಮೆ ಬೆಳೆಗಾರರಿಗೆ ಕೆಳಕಂಡ ಯೋಜನೆಗಳನ್ನು ರೂಪಿಸಿ ಅನುಷ್ಠಾನ ಗೊಳಿಸಲಾಗುತ್ತಿದೆ.

ಅ) ಕೇಂದ್ರ ರೇಷ್ಮೆ ಮಂಡಳೀಯ ಸಹಯೋಗದೊಂದಿಗೆ ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮಗಳು:

1. ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆಗೆ ಸಹಾಯಧನ: ಘಟಕದರ ಹೆಕ್ಟೇರಿಗೆ ರೂ.48,000/–, ಒಂದು ಹೆಕ್ಟೇರಿಗೆ ಗರಿಷ್ಠ ರೂ.24,000/–ಗಳ ಸಹಾಯಧನ ನೀಡಲಾಗುತ್ತಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಮಹಿಳೆಯರು ಒಂದು ಹೆಕ್ಟೇರಿಗಿಂತ ಕಡಿಮೆ ವಿಸ್ತೀರ್ಣದಲ್ಲಿ ಹನಿ ನೀರಾವರಿ ಅಳವಡಿಸಿಕೊಂಡರೆ ಶೇ.90 ರಷ್ಟು ಹಾಗೂ ಇತರರಿಗೆ ಶೇ.70 ರಷ್ಟು ಗರಿಷ್ಠ ರೂ.24,000/– ಗಳ ಸಹಾಯಧನ ನೀಡಲಾಗುತ್ತಿದೆ.

2. ಹೊಸ ಹಿಪ್ಪುನೇರಳೆ ತಳಿಯ ಒಂದು ಲಕ್ಷ ಸಸಿಗಳನ್ನು ಬೆಳೆಸಿ ವಿತರಿಸಲು ರೂ. 50,000/– ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ.

3. ಪ್ರತ್ಯೇಕ ಹುಳು ಸಾಕುವ ಮನೆ ನಿರ್ಮಾಣಕ್ಕೆ ಕೆಳಕಂಡಂತೆ ಸಹಾಯಧನ ನೀಡಲಾಗುತ್ತಿದೆ.

a) 100 ಚ.ಅ.ಮನೆಗೆ ರೂ.50,000/–

b) 600 ಚ.ಅ.ಮನೆಗೆ ರೂ.25,000/–

c) 375 ಚ.ಅ.ಮನೆಗೆ ರೂ.15,000/–

4. ರೇಷ್ಮೆ ಬೆಳೆಗಾರರಿಗೆ ಹುಳು ಸಾಕಾಣಿಕೆ ಸಲಕರಣೆಗಳ ಸರಬರಾಜಿಗೆ ಶೇ.50 ರಷ್ಟು ಗರಿಷ್ಟ ರೂ.15,000/–ಗಳ ಸಹಾಯಧನ ನೀಡಲಾಗುತ್ತಿದೆ.

5. ತರಬೇತಿ ಮತ್ತು ಟೂಲ್ ಕಿಟ್ಸ್ ಕಾರ್ಯಕ್ರಮದಡಿ ಒಬ್ಬ ರೈತರಿಗೆ ರೂ.250/– ಶಿಷ್ಯ ವೇತನ ಮತ್ತು ರೂ.1750/– ಮೌಲ್ಯದ ಟೂಲ್ ಕಿಟ್ಸ್ ನೀಡಲಾಗುತ್ತಿದೆ.

6 ವರ್ಮಿಕಾಂಪೋಸ್ಟ್ ಶೆಡ್‌ನಿರ್ಮಿಸುವ ರೇಷ್ಮೆ ಬೆಳೆಗಾರರಿಗೆ ಎರೆ ಹುಳು ಗೊಬ್ಬರದ ಕಾಂಪೋಸ್ಟ್ ಶೆಡ್‌ಗೆ ಶೇ.50 ರಷ್ಟು ಅಂದರೆ ರೂ. 7,000/– ಸಹಾಯಧನ ನೀಡಲಾಗುತ್ತಿದೆ.

7. ಚಾಕಿ ಸಾಕಾಣಿಕೆ ಕಟ್ಟಡ ಹಾಗೂ ಉಪಕರಣಗಳಿಗೆ ಸಹಾಯಧನ. ಘಟಕದರ ರೂ.3.00 ಲಕ್ಷ, ಶೇ.50ರ ಅಂದಠೆ ರೂ.1.50 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.

8. ಸೋಂಕು ನಿವಾರಕಗಳ ಖರೀದಿಗೆ ಸಹಾಯಧನ.

9. ಸ್ಥಳೀಯ ಭಾಷೆಗಳಲ್ಲಿ ದೃಶ್ಯ ಮತ್ತು ಪ್ರಚಾರ ಸಾಹಿತ್ಯ ಮುದ್ರಣ.

10. ಹೊಸ ಪ್ರದೇಶದಲ್ಲಿ ಉತ್ಪಾದಿಸಿ ಗೂಡಿನ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಿದ ಪ್ರತಿ ಕೆ.ಜಿ. ಗೂಡಿಗೆ ಮಹಿಳೆಯರಿಗೆ ರೂ.10/– ರಂತೆ ಪುರುಷರಿಗೆ ರೂ.5/– ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

11. ಮೈಸೂರು ಬಿತ್ತನೆ ಪ್ರದೇಶದಲ್ಲಿ ಬೆಳೆದ ಬಿತ್ತನೆಗೂಡು ಬಿತ್ತನೆಗೆ ಯೋಗ್ಯವಾಗಿದ್ದು ಬೇಡಿಕೆ ಇಲ್ಲದೆ ನೂಲು ಬಿಚ್ಚಾಣಿಕೆಗೆ ವಹಿವಾಟಾದ ಪ್ರತಿ ಕೆ.ಜಿ. ಗೂಡಿಗೆ ರೂ.40.00ಗಳ ಬೋನಸ್ ನೀಡಲಾಗುತ್ತಿದೆ.

ಆ) ಇಲಾಖೆಯಿಂದ ನೀಡುತ್ತಿರುವ ಸೌಲಭ್ಯಗಳು

1. ನೂತನ ತಾಂತ್ರಿಕತೆಗಳ ಅನುಸರಣೆಗಾಗಿ ತರಬೇತಿ

2. ಉತ್ತಮ ಗುಣಮಟ್ಟದ ಮೊಟ್ಟೆಗಳ ಸರಬರಾಜು

3. ಬೆಳೆದ ಗೂಡುಗಳ ವಿಲೇವಾರಿಗಾಗಿ ಗೂಡು ಮಾರುಕಟ್ಟೆಗಳ ನಿರ್ವಹಣೆ

4. ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ಸಹಾಯ.

ಇದಲ್ಲದೆ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ/ಜಿಲ್ಲಾ/ತಾಲ್ಲೂಕ್ ಪಂಚಾಯತ್ ಯೋಜನೆಗಳಡಿ ಹಿಪ್ಪುನೇರಳೆ ಬೆಳೆಯಲು ಪ್ರೋತ್ಸಾಹ ಧನ ರೂ.2500/–, ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣಕ್ಕೆ ಸಹಾಯಧನ ರೂ.25,000/– ಹಾಗೂ ರೂ.2500/–ಗಳ ರೇಷ್ಮೆ ಹುಳು ಸಾಕುವ ಸಲಕರಣೆಗಳ ಸರಬರಾಜು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಖ) ರಾಜ್ಯದ ಜಿಲ್ಲಾವಾರು ಬಿತ್ತನೆ ಕೋಠಿಗಳ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಜಿಲ್ಲೆ	ಬಿತ್ತನೆ ಕೋಠಿಗಳ ಸಂಖ್ಯೆ		
		ರಾಜ್ಯ ಸರ್ಕಾರ	ಕೇಂದ್ರ ಸರ್ಕಾರ	ಖಾಸಗಿ
1	ಬೆಂಗಳೂರ (ಗ್ರಾ)	10	2	110
2	ಬೆಂಗಳೂರು (ನ)	2	1	15
3	ಬಾಗಲಕೋಟೆ	1	–	–
4	ಬೆಳಗಾಂ	1	–	–
5	ಬಳ್ಳಾರಿ	1	–	–
6	ಬೀದರ್	1	–	–
7	ಬಿಜಾಪುರ	1	–	–
8	ಚಾಮರಾಜನಗರ	6	–	62
9	ಚಿತ್ರದುರ್ಗ	1	–	5
10	ಧಾರವಾಡ	1	–	–
11	ಹಾಸನ	1	–	–
12	ಕೊಡಗು	1	–	–
13	ಕೋಲಾರ	13	1	232
14	ಕೊಪ್ಪಳ	1	–	–
15	ಮಂಡ್ಯ	6	1	40
16	ಮೈಸೂರು	4	1	38
17	ಶಿವಮೊಗ್ಗ	1	–	–
18	ತುಮಕೂರು	4	–	31
19	ಉತ್ತರ ಕನ್ನಡ	1	–	–
20	ಮೈಸೂರು ಬಿತ್ತನೆ ವಲಯ	22	–	–
	ಒಟ್ಟು	**79**	**6**	**533**

ಈ ಬಿತ್ತನೆ ಕೋಠಿಗಳಲ್ಲಿ 2004–05ನೇ ಸಾಲಿನಲ್ಲಿ 1094.11 ಲಕ್ಷ ಹಾಗೂ 2005–06ನೇ ಸಾಲಿನ ಜನವರಿ–06 ನೇ ಸಾಲಿನ ಜನವರಿ–06ರ ಅಂತ್ಯಕ್ಕೆ 872.34 ಲಕ್ಷ ಮೊಟ್ಟೆ ಉತ್ಪಾದಿಸಲಾಗಿದೆ.

ಈ ಬಿತ್ತನೆ ಕೋಠಿಗಳಲ್ಲಿ ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಿ ಮಾರಾಟ ಮಾಡಲಾಗುತ್ತಿದೆ ಹಾಗೂ ಬೈವೋಲ್ಟೈನ್ ಮೊಟ್ಟೆಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತಿದೆ.

ರೇಷ್ಮೆ ಬೆಳೆಗಾರರಿಂದ, ಮೈಸೂರು ಬಿತ್ತನೆ ಪ್ರದೇಶದಲ್ಲಿ ಬೆಳೆದ ಬಿತ್ತನೆ ಗೂಡಿಗೆ ಕೆ.ಜಿ.ಗೆ ರೂ.250/–ರ ದರದಲ್ಲಿ ಖರೀದಿಸಲಾಗುತ್ತಿದೆ. ದ್ವಿತಳಿ ಬಿತ್ತನೆ ಗೂಡುಗಳನ್ನು ಬಹಿರಂಗ ಹರಾಜಿನಲ್ಲಿ ಖರೀದಿಸಲಾಗುತ್ತಿದೆ. ಪ್ರಸ್ತುತ ದ್ವಿತಳಿ ಪಿ2 ಮತ್ತು ದ್ವಿತಳಿ ಸಂಕರಣ ಮೊಟ್ಟೆ ಉತ್ಪಾದನೆಗೆ ಬಳಸುವ ದ್ವಿತಳಿ ಬಿತ್ತನೆ ಗೂಡಿಗೆ ಕೋಶ ಪರಿವರ್ತನೆಯ ಅನುಪಾತ ಆಧರಿಸಿ ಪ್ರತಿ ಕೆ.ಜಿ.ಗೆ ರೂ.300–360ರ ದರ ನೀಡಲಾಗುತ್ತಿದೆ.

ಅನುಬಂಧ

2005-06ನೇ ಸಾಲಿನಲ್ಲಿ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಆಗಿರುವ ವೆಚ್ಚದ ವಿವರ (ರೂ.ಲಕ್ಷಗಳಲ್ಲಿ)

ಕ್ರ.ಸಂ.	ಜಿಲ್ಲೆಗಳು	ಹನಿ ನೀರಾವರಿ	ಕಿಸಾನ್ ನರ್ಸರಿ	ಹುಳು ಸಾಕಾಣಿಕೆ	ಹುಳುಸಾಕಾಣಿಕೆ ಕಟ್ಟಡ	ಸಲಕರಣೆ ಬಾಕಿ ಸಾಕಾಣಿಕೆ ಕಿಟ್	ತರಬೇತಿ/ಟೂಲ್ ಸರಬರಾಜು	ಸೋಂಕುನಿವಾರಕ	ಒಟ್ಟು
1	ಬೆಂಗಳೂರು(ಗ್ರಾ)	24.24	23.54	50.475		1.25			99.505
2	ಬೆಂಗಳೂರು(ನ)	3.395	1.75	8.70					13.845
3	ಕೋಲಾರ	154.77	67.50	221.55	51.00	2.5			497.32
4	ತುಮಕೂರು	10.98	15.66	45.50	30.00	0.25			102.39
5	ಚಾಮರಾಜನಗರ	1.025	1.26	2.25		0.50			5.035
6	ಕೊಡಗು			1.50		0.0325			1.5325
7	ಮಂಡ್ಯ	2.86	2.72	21.525	3.3295			3.43	39.8645
8	ಮೈಸೂರು	2.68	2.43	10.525	0.15	0.74			16.525
9	ಚಿಕ್ಕಮಗಳೂರು	1.845	1.675			0.25			3.77
10	ದಕ್ಷಿಣ ಕನ್ನಡ	0.39		0.25					0.64
11	ಹಾಸನ	2.16	3.94	5.125	1.30	0.8715		1.47	14.8665
12	ಉಡುಪಿ			0.25					0.25
13	ಬಳ್ಳಾರಿ	3.206	1.95	19.05					24.205
14	ಚಿತ್ರದುರ್ಗ	4.835	3.135	12.875	1.20				22.045
15	ದಾವಣಗೆರೆ	1.17	2.395	5.775					9.340
16	ಶಿವಮೊಗ್ಗ	0.385	1.19	5.225	0.68				7.480
17	ಬೀದರ್	2.44	1.00	12.875	3.00				19.315
18	ಗುಲ್ಬರ್ಗ	2.435	4.39	9.825	0.75	0.195			17.595
19	ಕೊಪ್ಪಳ	1.88	2.00	6.25	0.75	0.1875			11.0675
20	ರಾಯಚೂರು	3.585	11.875	8.625	1.50	0.1875			25.7725
21	ಬಾಗಲಕೋಟೆ	1.67	10.59	2.625	1.45	0.1875			16.5225
22	ಬೆಳಗಾಂ	2.08	11.31	17.875	7.101	0.25			38.616
23	ಬಿಜಾಪುರ	2.10	3.24	4.00	1.00				10.34
24	ಧಾರವಾಡ		0.98	0.75		0.125			1.855
25	ಗದಗ	2.88	3.50	5.00		0.13			11.51
26	ಹಾವೇರಿ	1.29	13.14	8.00		0.125			22.555
27	ಉತ್ತರ ಕನ್ನಡ	0.44	1.38	4.15	0.95				6.92
28	ಮೈ.ಬಿ.ವ/ಅನೇಕಲ್	10.83	8.005	26.15		0.50	0.75		46.235
	ರಾಜ್ಯದ ಒಟ್ಟು	245.74	200.55	522.7	104.1605	0.50	8.5315	4.90	1.86.912